# ವಿಶ್ವ ರಂಗ ಸಂದೇಶ ೨೦೨೩

– ಸಮೀಹಾ ಆಯುಬ್

ಜಗತ್ತಿನ ನನ್ನೆಲ್ಲ ಮಿತ್ರರಿಗೆ ಹಾಗೂ ರಂಗಕಲಾವಿದರಿಗೆ,

ವಿಶ್ವರಂಗದಿನದಂದು ನಾನು ಈ ಸಂದೇಶವನ್ನು ನಿಮಗಾಗಿ ತಂದಿದ್ದೇನೆ. ಈಗ, ನಿಮ್ಮೊಂದಿಗೆ ಮಾತನಾಡುತ್ತಾ ನಾನು ಭಾವುಕಳಾಗುತ್ತಿರುವಂತೆಯೇ, ಈ ಹೊತ್ತಿನ ಜಗತ್ಕಾರ್ಪಣ್ಯದ ನಡುವೆ, ನಮ್ಮನ್ನು ಹೊಸಕಿಹಾಕಬಲ್ಲ ಒತ್ತಡ–ಭಾವಸಂಕರಗಳಿಂದ ಉಂಟಾಗುತ್ತಿರುವ ನೋವಿನ ಭಾರಕ್ಕೆ, ನನ್ನ ದೇಹದ ನರನರವೂ ನಲುಗುತ್ತಿದೆ. ನಮ್ಮ ಭೌತಿಕ ಪ್ರಪಂಚ ಮಾತ್ರವಲ್ಲ, ನಮ್ಮ ಆಧ್ಯಾತ್ಮಿಕ ನೆಲೆ ಹಾಗೂ ಚಿತ್ತಶಾಂತಿಗೆ ಮಾರಕವೆನಿಸುವ ಸಂಘರ್ಷ–ಯುದ್ಧ–ಪ್ರಕೃತಿವಿಕೋಪಗಳಿಂದಾಗಿ ಇಂದು ನಮ್ಮ ಜಗತ್ತು ಅನುಭವಿಸುತ್ತಿರುವ ಬವಣೆಯ ನೇರ ಪರಿಣಾಮವೇ ಅಸ್ಥಿರತೆ.

ಇಂದು ನಿಮ್ಮೊಂದಿಗೆ ಮಾತನಾಡುವಾಗ, ಜಗತ್ಸಮಸ್ತವೂ ವಿವಿಕ್ತದ್ವೀಪಗಳಂತಾಗಿದೆಯೇನೋ ಎನಿಸುತ್ತಿದೆ; ಅಥವಾ, ಮಸುಕಾದ ದಿಗಂತದಂಚಿನಲ್ಲಿ ಪಲಾಯನಗೈಯುತ್ತಿರುವ ನೌಕಾಸಮೂಹದಂತೆ; ಹರವಿದ ನೌಕಾಪಟವಿರುವ ಒಂದೊಂದು ನೌಕೆಯೂ ಯಾವುದೇ ದಿಗ್ದರ್ಶನವಿಲ್ಲದೇ ಸಾಗುವಂತೆ; ದಿಗಂತದಲ್ಲಿ ದಿಕ್ಸೂಚಕವಾದದ್ದೇನನ್ನೂ ಕಾಣದೆಯೂ ನೌಕೆ ಸಾಗುತ್ತಿರುವಂತೆ; ಭೋರ್ಗರೆವ ರಣಜಲಧಿಯಲ್ಲಿ ಬಹುಕಾಲ ಅಲೆದಾಡಿ, ಆಶ್ರಯದಾಯಕವಾದ ಸುರಕ್ಷಿತ ಬಂದರನ್ನು ತಲುಪುವ ಭರವಸೆಯೊಂದಿಗೆ, ನೌಕೆ ಮುಂದೆ ಸಾಗುತ್ತಲೇ ಇರುವಂತೆ.

ನಮ್ಮೀ ಜಗತ್ತು ಈ ಹೊತ್ತಿನಲ್ಲಿರುವಂತೆ ಹಿಂದೆಂದೂ ಬೆಸೆದುಕೊಂಡಿರಲಿಲ್ಲ; ಆದರೆ, ಅದೇ ವೇಳೆ, ಈ ಹೊತ್ತಿನಂತೆ ಪರಸ್ಪರ ದೂರವಾಗಿ, ಅಪಶ್ರುತಿಯ ಮೇಳವಾಗಿಯೂ ಇದ್ದದ್ದಿಲ್ಲ. ಇದುವೇ ಆಧುನಿಕ ಜಗತ್ತು ನಮ್ಮ ಮೇಲೆ ಹೊರಿಸಿರುವ ಘೋರ ವಿರೋಧಾಭಾಸ! ಆಧುನಿಕ ಸಂವಹನ–ವೃತ್ತಾಂತಪ್ರಸರಣಗಳು ಏಕತ್ರವಾಗಿ, ಭೌಗೋಲಿಕ ಎಲ್ಲೆಗಳೆಲ್ಲವನ್ನೂ ಮೀರುತ್ತಿರುವುದಕ್ಕೆ ನಾವು ಸಾಕ್ಷಿಯಾಗಿದ್ದೇವಾದರೂ, ಜಗತ್ತಿನಲ್ಲಿ ತಲೆದೋರಿರುವ ವೈರ–ಪ್ರಕ್ಷುಬ್ಧತೆಗಳು, ನಮ್ಮ ವಿಚಾರಗ್ರಹಿಕೆಯನ್ನು ಮೀರಿನಿಂತು, ಮೇಲ್ನೋಟಕ್ಕೆ ಏಕಮುಖತ್ವದಂತೆ ಕಾಣುವುದರ ನಡುವೆ, ಮಾನವತೆಯ ಅತಿಸಹಜ ನಿಜಾಂತಃಸತ್ತ್ವದಿಂದ ನಮ್ಮನ್ನು ದೂರವಾಗಿಸುವ ಮೂಲಭೂತವಾದ ಭಿನ್ನತೆಯನ್ನು ಸೃಷ್ಟಿಸಿವೆ.

ರಂಗಭೂಮಿ ತನ್ನ ನೈಜರೂಪದಲ್ಲಿ, ಮಾನವತೆಯ ನಿಜಾಂತಃಸತ್ತ್ವವನ್ನು – ಎಂದರೆ ಬದುಕನ್ನು – ಅವಲಂಬಿಸಿರುವ ಮಾನವೀಯ ಪ್ರಕ್ರಿಯೆಯಷ್ಟೇ. ಮಹಾಮಹಿಮನಾದ ಕಾನ್‌ಸ್ಟಾಂಟಿನ್ ಸ್ಟಾನಿಸ್ಲಾವ್‌ಸ್ಕಿ ಹೀಗೆನ್ನುತ್ತಾನೆ: “ಮಣ್ಣು ಮೆತ್ತಿದ ಪಾದಗಳಿಂದ ರಂಗಭೂಮಿಯನ್ನು ಎಂದೂ ಪ್ರವೇಶಿಸದಿರಿ. ನಿಮ್ಮ ಧೂಳು–ಕಶ್ಮಲಗಳನ್ನು ಹೊರಗೇ ಬಿಡಿ. ಯಾವೆಲ್ಲ ಸಂಗತಿಗಳು ನಿಮ್ಮ ಬದುಕನ್ನು ಕೆಡಿಸಿ, ಕಲಾನುಭವದಿಂದ ನಿಮ್ಮ ಮನಸ್ಸನ್ನು ವಿಚಲಿತಗೊಳಿಸುತ್ತಿವೆಯೋ – ನಿಮ್ಮನಿಮ್ಮ ಕ್ಷುಲ್ಲಕ ಚಿಂತೆ–ಜಗಳಗಳು, ಕ್ಷುದ್ರ ಕಾರ್ಪಣ್ಯಗಳು – ಇವನ್ನು ನಿಮ್ಮ ಹೊರಗಿನ ದಿರಿಸುಗಳೊಂದಿಗೆ ಬಾಗಿಲಿನಲ್ಲಿಯೇ ಇಟ್ಟು ಬನ್ನಿ”. ನಾವು ರಂಗವೇದಿಕೆಯನ್ನೇರುವಾಗ ಒಂದು ಮಾನವಶರೀರದೊಳಗೆ ಒಂದು ಜೀವವಾಗಿ ಏರುತ್ತೇವೆ. ಆದರೆ, ಈ ಜೀವಕ್ಕೆ, ತಾನೇ ವಿಭಜನೆಗೊಂಡು, ಅನೇಕವಾಗಿ, ಆ ನೂರಾರು ಜೀವಗಳನ್ನು ನಾವು ಜಗತ್ತಿಗೆ ಪಸರಿಸಿ, ಅವೆಲ್ಲವೂ ಮತ್ತೆ ಜೀವತಾಳಿ, ವಿಕಾಸಹೊಂದಿ, ಸುತ್ತಲೂ ತಮ್ಮ ಸೌರಭ ಬೀರುವಂತೆ ಮಾಡುವ ಅದ್ಭುತ ಶಕ್ತಿಯೊಂದಿದೆ.

ರಂಗಜಗತ್ತಿನಲ್ಲಿ ನಾಟಕಕಾರರಾಗಿ, ನಿರ್ದೇಶಕರಾಗಿ, ನಟರಾಗಿ, ಕವಿಗಳಾಗಿ, ಗೀತ–ನೃತ್ಯಕಾರರಾಗಿ – ಯಾರೂ ಹೊರತಾಗದೆ ನಾವೆಲ್ಲರೂ ಮಾಡುವುದು ಒಂದೇ – ಅದುವೇ, ನಾವು ವೇದಿಕೆಯ ಮೇಲೇರುವ ಮೊದಲು ಅಸ್ತಿತ್ವದಲ್ಲಿರದ ಜೀವವೊಂದನ್ನು ಸೃಷ್ಟಿಸುವ ಕ್ರಿಯೆ. ಈ ಜೀವಕ್ಕೆ ಬೇಕಾದದ್ದು ಕಾಳಜಿಯಿಂದ ಅದನ್ನೆತ್ತಿಕೊಳ್ಳುವ ಕೈ, ಬಿಗಿದಪ್ಪುವ ಒಲವು ತುಂಬಿದ ಎದೆ, ಸಾಂತ್ವನವೀಯುವ ದಯಾಪೂರ್ಣ ಹೃದಯ, ತಾನು ಬದುಕುಳಿದು ಮುನ್ನಡೆಯಲು ಹುರಿದುಂಬಿಸುವ ಸಮಚಿತ್ತ.

ಇರುಳ ತಮಕ್ಕೆ ಬೆಳಕೀಯುವ, ಅದರ ಶೈತ್ಯಕ್ಕೆ ಕಾವೀಯುವ, ಕತ್ತಲಲ್ಲಿ ಹೊಳೆಯುವ ಕೆಂಡದುರಿಯಂತೆ, ನಾವು ರಂಗದ ಮೇಲೆ ನಡಸುವುದು ಜೀವಸೃಷ್ಟಿಯೇ ಎನ್ನುವುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಜೀವಕ್ಕೆ ಮೆರುಗೀಯುವವರು ನಾವು. ಅದಕ್ಕೆ ಹುರುಪು–ಅರ್ಥವಂತಿಕೆಗಳನ್ನು ನೀಡುವವರೇ ನಾವು. ಮೌಢ್ಯ–ಉಗ್ರವಾದಗಳ ಕತ್ತಲನ್ನು ಕಲೆಯ ಬೆಳಕಿನಿಂದ ಎದುರಿಸುವವರು ನಾವು. ಜೀವಂತಿಕೆಯು ಜಗತ್ತನ್ನೆಲ್ಲ ಆವರಿಸಲಿ ಎನ್ನುವ ಆಶಯದಿಂದ ಜೀವತತ್ತ್ವದ ಮೊರೆಹೋದವರು ನಾವು. ಇದಕ್ಕಾಗಿಯೇ, ಸತ್ಯ–ಶಿವ–ಸುಂದರಗಳನ್ನು ಕಾಪಿಡುತ್ತಾ, ಜೀವವಿರುವುದೇ ಜೀವಿಸುವುದಕ್ಕಾಗಿ ಎನ್ನುವುದರಲ್ಲಿ ಪೂರ್ಣ ನಂಬಿಕೆಯಿಡುತ್ತಾ, ಈ ಪರಮೋನ್ನತ ಸಂದೇಶವನ್ನು ಸಾಕ್ಷಾತ್ಕರಿಸುವುದಕ್ಕಾಗಿಯೇ ನಾವು ನಮ್ಮ ಶ್ರಮ, ಬೆವರು, ಕಣ್ಣೀರು, ರಕ್ತ, ನರನಾಡಿಗಳನ್ನು ಮೀಸಲಿಡುತ್ತೇವೆ.

ನಾನು ಇಂದು ನಿಮ್ಮೊಂದಿಗೆ ಮಾತನಾಡುತ್ತಿರುವುದು ಬರಿಯ ಮಾತಿಗಷ್ಟೇ ಅಲ್ಲ, ಅಥವಾ ಎಲ್ಲ ಕಲೆಗಳ ಜನಕನಾದ ರಂಗಕಲೆಯನ್ನು ಆತನ ವಿಶ್ವದಿನದಂದು ಸಂಭ್ರಮಿಸಲೂ ಅಲ್ಲ; ಬದಲಿಗೆ, ಇದೋ ನಾನು ನಿಮ್ಮೆಲ್ಲರಿಗೂ ಕರೆ ನೀಡುತ್ತೇನೆ – ಬನ್ನಿ ಕೈಕೈ ಜೋಡಿಸಿ, ಹೆಗಲಿಗೆ ಹೆಗಲು ತಾಗಿಸಿ ನಿಂತು, ರಂಗವೇದಿಕೆಯಲ್ಲಿ ಅಭ್ಯಾಸವಾಗಿಹೋಗಿರುವಂತೆ ತಾರಸ್ವರದಲ್ಲಿ ಕೂಗೋಣ; ನಮ್ಮ ಮಾತುಗಳು ಹೊರಹೊಮ್ಮಿ ಸಮಸ್ತ ಪ್ರಪಂಚದ ಸುಪ್ತಪ್ರಜ್ಞೆಯನ್ನು ಜಾಗೃತಗೊಳಿಸಲಿ; ಲುಪ್ತವಾಗಿರುವ ಮಾನವತೆಯ ತಿರುಳನ್ನು ನಿಮ್ಮೊಳಗೆ ಶೋಧಿಸುವಂತಾಗಲಿ – ಮುಕ್ತ, ಪ್ರಿಯ, ಸಹೃದಯ, ಸೌಮ್ಯ, ಸ್ನೇಹಮಯ ಮಾನವನನ್ನು. ಜೊತೆಗೆ, ಹಿಂಸೆ, ಜನಾಂಗಮತ್ಸರ, ರಕ್ತಸಿಕ್ತ ಸಂಘರ್ಷಗಳು, ಏಕಪಕ್ಷೀಯಧೋರಣೆ, ಉಗ್ರವಾದಗಳ ಈ ಕ್ರೂರಸ್ವರೂಪವನ್ನು ನಿರಾಕರಿಸುವಂತೆ ಮಾಡಲಿ. ಮಾನವರು, ಈ ಭೂಮಿಯ ಮೇಲೆ, ಈ ನಭದ ಕೆಳಗೆ, ಸಾವಿರಾರು ವರ್ಷಗಳಿಂದ ಸಾಗಿ ಹೋಗಿದ್ದಾರೆ, ಮುಂದೆಯೂ ಸಾಗಲಿದ್ದಾರೆ. ಹೀಗಾಗಿ, ಯುದ್ಧ ಹಾಗು ರಕ್ತಸಿಕ್ತ ಸಂಘರ್ಷಗಳ ಕೆಸರಿನಿಂದ ನಿಮ್ಮ ಪಾದಗಳನ್ನು ತೆಗೆದುಬಿಡಿ, ಅವುಗಳನ್ನು ರಂಗಭೂಮಿಯ ಬಾಗಿಲಿನಾಚೆಯೇ ಬಿಟ್ಟುಬಿಡಿ. ಬಹುಶಃ ಆಗ, ಸಂದೇಹಗಳ ಮಬ್ಬುಕವಿದ ನಮ್ಮ ಮಾನವತೆ, ಮತ್ತೊಮ್ಮೆ ನಾವೆಲ್ಲರೂ ಮಾನವರು, ಸೋದರಬಾಂಧವರು ಎಂದು ಹೆಮ್ಮೆಪಡಲು ನಿಜಕ್ಕೂ ಅರ್ಹರು ಎನ್ನುವ ಅಸ್ಖಲಿತ ನಿಶ್ಚಯವಾಗಿ ಪರಿಣಮಿಸಬಹುದು.

ಮೊಟ್ಟಮೊದಲ ವೇದಿಕೆಯಲ್ಲಿ ಮೊಟ್ಟಮೊದಲ ನಟ ಕಾಣಿಸಿಕೊಂಡಾಗಿನಿಂದ ಜ್ಞಾನೋದಯದ ದೀವಟಿಗರೆನಿಸಿರುವ ನಮ್ಮ – ಎಂದರೆ – ನಾಟಕಕರ್ತೃಗಳ ಧ್ಯೇಯವೆಂದರೆ, ಯಾವುದು ಅಮಾನವೀಯ–ಘೋರ–ಕುರೂಪವೆನಿಸಿದೆಯೋ, ಮುಂಚೂಣಿಯಲ್ಲಿ ನಿಂತು ಅದನ್ನು ಎದುರಿಸುವುದು; ಸುಂದರ, ನಿರ್ಮಲ, ಮಾನವೀಯವಾದ ಎಲ್ಲವನ್ನೂ ಬಳಸಿ ಅದನ್ನು ಎದುರಿಸುವುದು. ಜೀವಪ್ರಸರಣಶಕ್ತಿ ನಮಗಲ್ಲದೆ ಇನ್ಯಾರಿಗೂ ಇಲ್ಲ. ಜಗತ್ತು ಒಂದುಗೂಡಲು, ಮಾನವತೆ ಒಂದುಗೂಡಲು, ನಾವೆಲ್ಲರೂ ಒಟ್ಟಾಗಿ ಪಸರಿಸೋಣ, ಪಸರಿಸೋಣ.

Original Message :
Samiha Ayoub, Egypt
Egyptian Actress

Translation into Kannada :
Rashmi Vinay
In memory of my late father
Sreekanta Gundappa,
Theatre activist, Mysuru,
Karnataka
rushme.vin@gmail.com